■ ವಿಶಾಖ ಎನ್.

# ಬಜರಂಗಿ ಕ್ಲೈಮ್ಯಾಕ್ಸ್ ಕಥೆ



ಈಗ ಹನುಮ ಮುಂಚೂಣಿಯಲ್ಲಿದ್ದಾನೆ. ಕೆಲವರು ಅವನ ಭಜನೆ ಮಾಡುತ್ತಿದ್ದರೆ, ರಾಜಕಾರಣಿಗಳಿಗೆ ಅವನೂ ಚುನಾವಣಾ ವಿಷಯವಾಗಿಹೋದ. 2015ರಲ್ಲಿ ತೆರೆಕಂಡಿದ್ದ 'ಬಜರಂಗಿ ಭಾಯಿಜಾನ್' ಹಿಂದಿ ಸಿನಿಮಾ ನೆನಪಿದೆಯಾ? ಅದರಲ್ಲಿ ಸಲ್ಮಾನ್ ಖಾನ್ ಹನುಮ ಭಕ್ತ. ಅವನು ಪಾಕಿಸ್ತಾನದಿಂದ ಅಕಸ್ಮಾತ್ತಾಗಿ ಭಾರತಕ್ಕೆ ಬಂದು ಸಿಲುಕಿದ, ಮಾತು ಬಾರದ–ಕಿವಿಯೂ ಕೇಳದ ಏಳರ ಬಾಲಕಿಯನ್ನು ಮನೆ ತಲುಪಿಸುವ ಸಾಹಸ ಮಾಡುತ್ತಾನೆ. ಆ ಸಿನಿಮಾದಲ್ಲಿ ಪವನ್ ಎನ್ನುವುದು ಸಲ್ಮಾನ್ ನಿರ್ವಹಿಸಿದ್ದ ಪಾತ್ರದ ಹೆಸರು. ಅದರರ್ಥವೂ ಬಜರಂಗಿಯೇ. ಈಗಿನ ರಾಜಕಾರಣಿಗಳ ಉಸಾಬರಿಯನ್ನು ನೋಡಿದಾಗ ನೆನಪಾಗುವ ಆ ಬಜರಂಗಿಯ ಚಿತ್ರಕಥಾ ವಿಶೇಷ ಸಂಗತಿಯೊಂದು ಇತ್ತೀಚೆಗೆ ಸುದ್ದಿಯಾಯಿತು. ಸಲ್ಮಾನ್ ಖಾನ್ ಆ ಸಿನಿಮಾದ ಕ್ಲೈಮ್ಯಾಕ್ಸ್ ಅನ್ನು ಬದಲಿಸಬೇಕು ಎಂದು ಹೇಳಿದ್ದ ಸಂಗತಿ ಅದು.

ನಿರ್ದೇಶಕ ಎಸ್.ಎಸ್. ರಾಜಮೌಳಿ ಅವರ ತಂದೆ ವಿಜಯೇಂದ್ರ ಪ್ರಸಾದ್ 'ಬಜರಂಗಿ ಭಾಯಿಜಾನ್' ಸಿನಿಮಾಗೆ ಕಥೆ ಬರೆದಿದ್ದರು. ಆಮೇಲೆ ಚಿತ್ರಕಥಾ ಹೆಣಿಗೆಯಲ್ಲೂ ಅವರ ಕಾಣ್ಕೆ ಇತ್ತು. ನಿರ್ದೇಶಕ ಕಬೀರ್ ಖಾನ್ ನಿರ್ದೇಶಿಸಿದ್ದ ಆ ಸಿನಿಮಾವನ್ನು ಕನ್ನಡಿಗ ರಾಕ್‌ಲೈನ್ ವೆಂಕಟೇಶ್ ನಿರ್ಮಿಸಿದ್ದರು. ಚಿತ್ರದ ಕ್ಲೈಮ್ಯಾಕ್ಸ್‌ನಲ್ಲಿ ಮಗುವನ್ನು ಸಲ್ಮಾನ್ ಖಾನ್, ಪತ್ರಕರ್ತನ ಪಾತ್ರ ನಿರ್ವಹಿಸಿದ್ದ ನವಾಜುದ್ದೀನ್ ಸಿದ್ದಿಕಿಗೆ ಹಸ್ತಾಂತರಿಸುತ್ತಾರೆ. ಆಗ ಅವರ ಕಾಲಿಗೆ ಗುಂಡು ತಗಲುತ್ತದೆ. ಆದಾಗ್ಯೂ ಮಗುವನ್ನು ಗುರಿ ಮುಟ್ಟಿಸಿದ ಖುಷಿ ಅವರ ಮುಖದಲ್ಲಿ ಎದ್ದುಕಾಣುತ್ತದೆ. ಮಗುವನ್ನು ತಾಯಿಗೆ ಖುದ್ದು ತಮ್ಮ ಪಾತ್ರವೇ ತಲುಪಿಸುವಂತೆ ಕ್ಲೈಮ್ಯಾಕ್ಸ್ ಅನ್ನು ಬದಲಿಸಿದರೆ ಚೆನ್ನಾಗಿರುತ್ತದೆ ಎಂದು ಸಲ್ಮಾನ್ ಖಾನ್ ಡಬ್ ಮಾಡುವ ಹಂತದಲ್ಲಿ ಸಲಹೆ ನೀಡಿದರು. ರಾಜಮೌಳಿ ಕೂಡ ವಿಜಯೇಂದ್ರ ಪ್ರಸಾದ್ ಅವರಿಗೆ ಕ್ಲೈಮ್ಯಾಕ್ಸ್ ತಿದ್ದಿ ಎಂದು ಆಗ ಹೇಳಿದ್ದರಂತೆ. ಆದರೆ, ಅಷ್ಟು ಹೊತ್ತಿಗೆ ಚಿತ್ರೀಕರಣ ಮುಗಿದಿದ್ದರಿಂದ ಸಿನಿಮಾದ ಒಟ್ಟಾರೆ ಪರಿಣಾಮವೇನೂ ಮುಕ್ಕಾಗುವುದಿಲ್ಲ ಎಂದು ಮರು ಚಿತ್ರೀಕರಣ ಮಾಡಲಿಲ್ಲ.

'ಬಜರಂಗಿ ಭಾಯಿಜಾನ್' ಸಿನಿಮಾವು ಒಟ್ಟು ₹915 ಕೋಟಿಗೂ ಹೆಚ್ಚು ವಹಿವಾಟನ್ನು ದೇಶ–ವಿದೇಶಗಳಲ್ಲಿ ನಡೆಸಿತ್ತು. ಅದಾದ ನಂತರ ಸಲ್ಮಾನ್ ಖಾನ್‌ಗೆ ಆ ಮಟ್ಟದ ಹಿಟ್ ಚಿತ್ರವೊಂದನ್ನು ನೀಡಲು ಇದುವರೆಗೆ ಸಾಧ್ಯವಾಗಿಲ್ಲ. ■



## ಮಕ್ಕಳ ಮನೋಲೋಕದ 'ಮ್ಯೂಸಿಕ್ ಟೀಚರ್'

'ವಿಲ್ಲಿಂಗ್ ಟು ಸ್ಯಾಕ್ರಿಫೈಸ್' ಎಂಬ ಕಿರುಚಿತ್ರಕ್ಕೆ ರಾಷ್ಟ್ರ ಪ್ರಶಸ್ತಿ ದಕ್ಕಿಸಿಕೊಂಡಿದ್ದ ಪಾಪರಾವ್ ಬಿಯ್ಯಾಲ 'ಮ್ಯೂಸಿಕ್ ಟೀಚರ್' ಎಂಬ ತಮಿಳು ಸಿನಿಮಾ ನಿರ್ದೇಶಿಸಿದ್ದಾರೆ. ಶ್ರಿಯಾ ಸರಣ್ ಅದರ ಕೇಂದ್ರ ಪಾತ್ರ. ಹಿಂದಿಯ ಹರ್ಮನ್ ಜೋಶಿ ಅವರೂ ಇನ್ನೊಂದು ಮುಖ್ಯಪಾತ್ರದಲ್ಲಿ ಅಭಿನಯಿಸಿದ್ದಾರೆ.

ಕ್ರೀಡೆಯಲ್ಲಿ ಅಪಾರ ಆಸಕ್ತಿ ಹೊಂದಿರುವ ಪಾಪರಾವ್ ಅವರನ್ನು ಚಿಕ್ಕ ಮಕ್ಕಳು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಸಂಗತಿ ಬಹುವಾಗಿ ಕಾಡಿತಂತೆ. ಆ ಉಮೇದಿನಿಂದಲೇ ಹುಟ್ಟಿದ ಕಥೆಯನ್ನು ಅವರು ಸಿನಿಮಾ ಆಗಿಸಲು ಹೊರಟರು. ಸಿನಿಮಾಗೆ ಪೂರಕವಾಗಿ ಬೇಕಿದ್ದ ಸಂಗೀತದ ಕುರಿತು ತಿಳಿಯಲೆಂದೇ ಅವರು ನ್ಯೂಯಾರ್ಕ್‌ನಲ್ಲಿ ಅಧ್ಯಯನ ನಡೆಸಿದರು. ಆಮೇಲೆ ಚಿತ್ರಕಥಾ ಸಾರಾಂಶ ಇನ್ನೂ ಗಟ್ಟಿಯಾಯಿತು. ಸ್ನೇಹಿತರೊಬ್ಬರ ಸಂಪರ್ಕದಿಂದಾಗಿ ಇಳಯರಾಜ ಅವರನ್ನು ಸಂಪರ್ಕಿಸಿದರು. ಚಿತ್ರಕಥೆ ಕೇಳಿ ಸ್ವರ ಸಂಯೋಜನೆ ಮಾಡಲು ಇಳಯರಾಜ ಒಪ್ಪಿದರು. ಹೀಗಾಗಿ ಸಿನಿಮಾ ಇನ್ನೊಂದು ಮಟ್ಟಕ್ಕೆ ಹೋಯಿತು.

ಶ್ರಿಯಾ ಸರಣ್ ಈ ಸಿನಿಮಾದಲ್ಲಿನ ಸಂಗೀತ ಕೇಳಿ ಮೋಡದ ಮೇಲೆ ತೇಲಿಹೋದಂತಹ ಅನುಭವ ಪಡೆದುಕೊಂಡಿದ್ದಾರಂತೆ. ಹರ್ಮನ್ ಜೋಶಿ ಜತೆಯಲ್ಲಿ ಒಂದೊಮ್ಮೆ ಜಾಹೀರಾತಿನಲ್ಲಿ ಕಾಣಿಸಿಕೊಂಡಿದ್ದ ಅವರು, ಈ ಸಿನಿಮಾದಲ್ಲಿ ಪೂರ್ಣಪ್ರಮಾಣದಲ್ಲಿ ನಟಿಸಿದರು. ಅವರಿಂದಲೂ ಕಲಿಯಲು ಸಾಕಷ್ಟು ಸಂಗತಿಗಳು ಸಿಕ್ಕವು ಎಂದು ಶ್ರಿಯಾ ಖುಷಿಪಟ್ಟರು. ಸಿನಿಮಾ ಮೇ 12ರಂದು ತೆರೆಕಂಡಿದ್ದು, ಇಳಯರಾಜ ಸಂಗೀತಕ್ಕೆ ಹೆಚ್ಚೇ ಅಂಕಗಳು ಸಂದಿವೆ. ■